ಗ್ರಾಮದಲ್ಲಿ ಗುಡಿ ಕಟ್ಟುವ ಬಗ್ಗೆ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

3. ಶ್ರೀ ಎಸ್.ಜಿ. ಹಾಲಪ್ಪ : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅ) ದಾವಣಗೆರೆ ತಾಲ್ಲೂಕಿನ ಮಾಯಕೊಂಡ ಗ್ರಾಮದಲ್ಲಿ ಕರಲಕ್ಕಿ ಪಿಕಪ್ ನಾಲುವೆಯ ಪರಿಹಾರದ ಬಗ್ಗೆ.

ಆ) ಕಾರವಾರದ ಗೋಬರ್ ಅನಿಲ ಯಂತ್ರ ಮೇಲ್ವಿಚಾರಕರ ವೇತನದ ಬಗ್ಗೆ.

ಇ) ದಾವಣಗೆರೆಯ ಪೋಲೀಸ್ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ಕೆಲಸ ಕೊಡುವುದರ ಬಗ್ಗೆ.

4. ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಅರ್ಜಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅ) ಚಿಕ್ಕಮಗಳೂರು ತಾಲ್ಲೂಕಿನ ಅಣೂರು ಗ್ರಾಮದ ಮಾರಿ ಗಂಡಿ ರಸ್ತೆಗೆ ಜಲ್ಲಿ ಹಾಕಿಸುವುದರ ಬಗ್ಗೆ.

ಆ) ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕು ಪಳೇ ಆಲ್ಲೂರು ಗ್ರಾಮಕ್ಕೆ ಸಣ್ಣ ನೀರಾವರಿ ಯೋಜನೆಯ ಮೂಲಕ ಕುಡಿಯುವ ನೀರನ್ನು ಒದಗಿಸುವುದರ ಬಗ್ಗೆ.

ಅಧ್ಯಕ್ಷರು : ಅರ್ಜಿಗಳನ್ನು ಸಭೆಯು ಮಂಡಿಸಲಾಯಿತು.

ಶ್ರೀ ವಾಟಾಳ್‌ನಾಗರಾಜ್ : ಕೇಬಲ್ ಟಿ.ವಿ ಬಗ್ಗೆ ಇಂದು ಬಂದ್‌ನ್ನು ಆಚರಿಸುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ಹೇಳಿಕೆಯನ್ನು ಕೊಡುತ್ತದೆಯೇ?

ವಿಧಾನ ಸಭೆಯ ಮೊಗಸಾಲೆಗೆ ಅನಧಿಕೃತ ಪ್ರವೇಶದ ಬಗ್ಗೆ ಸಭಾಧ್ಯಕ್ಷರ ತೀರ್ಪು

ಅಧ್ಯಕ್ಷರು : ಈಗ ನಾನು ಸದನದ ಅಭಿಪ್ರಾಯವನ್ನು ಕೇಳುವುದಕೋಸ್ಕರ ಈ ವಿಚಾರವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಕಳೆದ ಅಧಿವೇಶದಲ್ಲಿ ವಿಧಾನಸಭೆಯ ಮೊಗಸಾಲೆಯಲ್ಲಿ ಅನಧಿಕೃತ ಪ್ರವೇಶದ ಬಗ್ಗೆ ನಾನು ಒಂದು ತೀರ್ಮಾನ ತೆಗೆದು ಕೊಂಡಿದ್ದೆ. ತೀರ್ಮಾನವನ್ನು ತೆಗೆದುಕೊಂಡಿರತಕ್ಕ ಹಿನ್ನೆಲೆಯಲ್ಲಿ ಬಹಳ ಮಂದಿ ಸದಸ್ಯರು ನನ್ನ ಕಛೇರಿಗೆ ಬಂದು ಅನಧಿಕೃತ ಜನರನ್ನು ನಿಯಂತ್ರಣ ಮಾಡಿದ್ದರಿಂದ ನಾವುಗಳು ಶಾಂತಿ ಸಮಾಧಾನದಿಂದ ಚರ್ಚೆಯಲ್ಲಿ ಭಾಗವಹಿಸಲು ಯೋಗ್ಯವಾದಂತಹ ವಾತವರಣ ಮಾಡಿದೆ ಎಂದು ತಿಳಿಸಿದ್ದಾರೆ. ಈ ದೃಷ್ಟಿಯಿಂದ ನಾನು ಪಹರೆ ಸಿಬ್ಬಂದಿಗಳಿಗೆ ಮೊಗಸಾಲೆಯಲ್ಲಿ ಅನಧಿಕೃತವಾಗಿ ಯಾರು ಬಂದರು ಬಿಡಬಾರದೆಂದು ಹೇಳಿದ್ದೆ, ನನ್ನ ಈ ತೀರ್ಮಾನವನ್ನು ಅವರು ನಿರ್ವಹಿಸುತ್ತಿದ್ದಾರೆ. ನನಗೆ ಸಂತೋಷವೇನೆಂದರೆ ಕೆಲವು ಮಂತ್ರಿಗಳು, ಮಾನ್ಯ ಸಂಸದೀಯ ಸಚಿವರು, ಮಾನ್ಯ ಸಹಕಾರ ಸಚಿವರು ನನ್ನ ಕ್ರಮವನ್ನು ಒಪ್ಪಿ ಅವರೊಂದಿಗೆ ಬಂದಂತಹ ಜನರನ್ನು ಪಹರೆ ಸಿಬ್ಬಂದಿಯವರು ತಡೆದ ಮೇಲೆ ಅಲ್ಲಿಯೆ ಡಿಸ್‌ಪೋಸ್ ಮಾಡಿದ್ದಾರೆ. ಆದರೆ ಕೆಲವು ಸದಸ್ಯರು ವಾಚ್ ಅಂಡ್ ವಾರ್ಡ್ ಮೇಲೆ ವಾಗ್ದಾಳಿಕ್ಕೆ ಇಳಿದು ವಾಚಾಮಗೋಚರವಾಗಿ ಅವರನ್ನು ಬೈದಿದ್ದಾರೆ. ಇದು ನನ್ನ ಆಜ್ಞೆ, ಅದನ್ನು ಪರಿಪಾಲನೆ ಮಾಡತಕ್ಕದ್ದು ಪಹರೆ ಸಿಬ್ಬಂದಿಯ ಕರ್ತವ್ಯ, ಅವರನ್ನು ಸುಮ್ಮನೆ ಬೈದರೆ ಏನು ಪ್ರಯೋಜನ ಇದು ಒಂದು ರೀತಿ ನನ್ನನ್ನೆ ಬೈದಂತಾಗುತ್ತದೆ. ನಾನು ಸಭೆಯ ಒಟ್ಟಾರೆ ಅಭಿಪ್ರಾಯವನ್ನು ಕೇಳಿ ಈ ರೀತಿ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಸಂಸತ್ತಿನಲ್ಲಿರತಕ್ಕ ಒಂದು ವ್ಯವಸ್ಥೆ ಮಾಜಿ ಮತ್ತು ಹಾಲಿ ಸದಸ್ಯರುಗಳು ಹಾಗೂ ಪ್ರಸ್ನಪತ್ರನ್ನು ಪೊರತು ಪಡಿಸಿ, ಬೇರೆಯವರನ್ನು

ನಿರ್ಭಂದಿಸುವುದರಿಂದ ನಮಗೆ ಸಮಾಧಾನ ಹಾಗೂ ನೆಮ್ಮದಿ ಸಿಕ್ಕಿದೆ, ಅದಕ್ಕಾಗಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಈಗ ಒಂದು ನಿಯಂತ್ರಣ ಇದೆ. ಇದನ್ನು ಪರಿಪಾಲಿಸಿಕೊಂಡು ಹೋಗಬೇಕೆಂದು ತಮ್ಮನ್ನು ನಾನು ವಿನಮ್ರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವಿಶೇಷವಾದಂಥ ಸಂದರ್ಭದಲ್ಲಿ ತಾವು ಅನುಮತಿ ಕೊಡುವುದಕ್ಕೆ ಅವಕಾಶ ಇದೆ. ಏಕೆಂದರೆ ಈ ಒಂದು ವ್ಯಾಪ್ತಿಯೊಳಗೆ ಬರದೇ ಇರದಂತವರು ಬರಲೇಬೇಕಾದ ಪ್ರಸಂಗ ಬಂದರೆ ತಾವು ಅನುಮತಿ ಕೊಡಬೇಕಾಗುತ್ತದೆ. ಇದು ನಮ್ಮೆಲ್ಲರಿಗಿಂತ ಹೆಚ್ಚು ಸಂತೋಷ ಮಾನ್ಯ ಮಂತ್ರಿಗಳಿಗಾಗಿರಬಹುದು. ಮಂತ್ರಿಮಂಡಲದ ಮೊಗಸಾಲೆಯಲ್ಲಿ ಏನಾದರೂ ಸದಸ್ಯರ ಜೊತೆ ಮಾತನಾಡುವುದಕ್ಕೆ ಅವಕಾಶ ಇದೆ ಎಂದರೆ ಈಗಿರುವ ವ್ಯವಸ್ಥೆಯಿಂದ ಸಾಧ್ಯ. ಅದನ್ನು ತಾವು ಮಾಡಿರತಕ್ಕಂತಹದು ಸರಿಯಾಗಿದೆ ಎಂದು ನಾನು ಅಭಿನಂದಿಸುತ್ತೇನೆ. ಸದಸ್ಯರಿಂದ ಸಹಕಾರ ಸಿಗಲಿಲ್ಲವೆಂದರೆ ಅವರ ಮೇಲೆ ಕೂಡ ಕ್ರಮ ಜರುಗಿಸಬೇಕೆಂದು ನಾನು ಹೇಳುವುದಿಲ್ಲ ಅವರನ್ನು ಕರೆದು ಹೇಳತಕ್ಕಂತಹ ಅಧಿಕಾರ ತಮಗೆ ಇದೆ. ಆದ್ದರಿಂದ ತಾವು ಈ ಕೆಲಸವನ್ನು ಮಾಡಬಹುದು. ಈಗಿನ ವ್ಯವಸ್ಥೆಯನ್ನು ಮುಂದುವರಿಸಬೇಕಾಗಿದೆ. ಅದಕ್ಕಾಗಿ ತಮಗೆ ನಮ್ರತೆಯಿಂದ ವಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಸಂಸದೀಯ ಮತ್ತು ಸಹಕಾರ ಮಂತ್ರಿಗಳು ಇದನ್ನು ಪುನಃ ಪೂರ್ವಕವಾಗಿ ಸ್ವೀಕರಿಸಿದ್ದಾರೆ. ಒಬ್ಬಿಬ್ಬರ ಮಂತ್ರಿಗಳ ಹೆಸರುಗಳನ್ನು ಹೇಳಿದ್ದೀರಿ, ಅದೇ ರೀತಿ ಎಲ್ಲಾ ಮಂತ್ರಿಗಳೂ ಇದನ್ನು ಪುನಃಪೂರ್ವಕವಾಗಿ ಸ್ವಾಗತಿಸಬೇಕಾಗಿದೆ.

ಶ್ರೀ ವಾಟಾಳ್‌ನಾಗರಾಜ್ : ತಾವು ಮೊಗಸಾಲೆಯನ್ನು ತೆಗೆದುಕೊಂಡಿರುವುದು ಅದು ಸ್ವಂತಕ್ಕೆ ತೆಗೆದುಕೊಂಡಿಲ್ಲ, ಇಡೀ ಸಭೆಯ ಸದಸ್ಯರುಗಳ ಮತ್ತು ಮಂತ್ರಿಗಳ ಅನುಕೂಲಕ್ಕೆ ತೆಗೆದುಕೊಂಡಿರತಕ್ಕದ್ದು. ಆದ್ದರಿಂದ ಅದನ್ನು ಎಲ್ಲರೂ ಸ್ವಾಗತ ಮಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. ನಾವುಗಳೆಲ್ಲರೂ ತಮ್ಮ ನಿರ್ಣಯವನ್ನು ಸ್ವಾಗತ ಮಾಡುತ್ತೇವೆ. ಇದು ಎಂದೆಂದೂ ಇದೇ ರೀತಿ ಇರಲಿ ಎಂಬುದಾಗಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಆದಷ್ಟು ಬೇಗ ನನ್ನನ್ನು ಡಿಸ್‌ಪೋಸ್ ಮಾಡಿ ನಿಮ್ಮ ಪ್ರಶ್ನೆ ಎತ್ತುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಮಾನ್ಯ ಸದಸ್ಯರುಗಳಲ್ಲಿ ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನ್ನ ನಿರ್ಧಾರವನ್ನು ಟಾಟೂ ತಪ್ಪದೆ ನಮ್ಮ ಸಿಬ್ಬಂದಿಯವರು ಜಾರಿಗೆ ತರುತ್ತಾರೆ ಅವರ ಜೊತೆ ಸಹಕರಿಸಬೇಕೆಂದು ಹೇಳುತ್ತೇನೆ. ನನ್ನ ಈ ನಿರ್ಣಯ ಕೇವಲ ಮೊಗಸಾಲೆಗೆ ಮಾತ್ರ ಅನ್ವಯಿಸುತ್ತದೆ. ಮಂತ್ರಿಗಳ ಕೊಠಡಿಗೆ ನನ್ನ ಪವರ್ ಅಲ್ಲಿಯವರೆಗೂ ಹೋಗುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ ತಾವು ಸೆಂಟ್ರಲ್ ಹಾಲ್ ಮಾಡುತ್ತೇವೆಂದು ಹೋದ ಸಭೆಯಲ್ಲಿ ಹೇಳಿದ್ದಿರಿ, ಪಾರ್ಲಿಮೆಂಟ್ ತರಹ ಮಾಡಿ ಅದಕ್ಕೆ ಒಂದು ವಿಶೇಷವಾದ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಿರಿ, ಎಷ್ಟರ ಮಟ್ಟಿಗೆ ಈ ಯೋಜನೆ ಕಾರ್ಯಗತವಾಗಿದೆ ಎಂಬುದನ್ನು ಸ್ವಲ್ಪ ಸಭೆಗೆ ತಿಳಿಸಿ.

ಅಧ್ಯಕ್ಷರು : ಈಗಾಗಲೇ ಸೆಂಟ್ರಲ್ ಹಾಲ್ ಮಾಡುವುದಕ್ಕೆ ಸಂಬಂಧಪಟ್ಟಂತೆ ಗೌರ್ನಮೆಂಟ್ ಆರ್ಕಿಟೆಕ್ಟ್ ರೂಪುರೇಶೆಗಳನ್ನು, ವಿನ್ಯಾಸಗಳನ್ನು ಮಾಡುತ್ತಿದ್ದಾರೆ. ಬಹುಶಃ ಸರ್ಕಾರದವರು ಮುಂದಿನ ಆಯವ್ಯಯದಲ್ಲಿ ಇದಕ್ಕೂ ಕೂಡ ಕೊಂಚ ಹಣವನ್ನು ಒದಗಿಸುತ್ತಾರೆಂದು ನಾನು ಆಸೆ ಮಾಡುತ್ತೇನೆ. ಇದಕ್ಕೆ ಸರ್ಕಾರದ ಸಂಪೂರ್ಣ ಸಹಕಾರ ಇದೆ. ಸೆಂಟ್ರಲ್ ಹಾಲ್ ಶೀಘ್ರದಲ್ಲಿಯೇ ಆಗಬೇಕು ಎನ್ನುವ ಆಸೆ ಇದೆ. ಅದನ್ನು ನಾವು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್‌ನಾಗರಾಜ್ : ಸೆಂಟ್ರಲ್‌ಹಾಲ್‌ಗೆ ದಿವಂಗತ ಹನುಮಂತಯ್ಯನವರ ಹೆಸರನ್ನು ಇಡಬೇಕೆಂದು ಹೋದ ಸಾರಿ ಹೇಳಿದ್ದೆ, ಆ ಒಂದು ಪವಿತ್ರವಾದ ಕಾರ್ಯವನ್ನು ತಾವು ಮಾಡಬೇಕು.

ಅಧ್ಯಕ್ಷರು :"ಕೂಸು ಹಟ್ಟುವುದಕ್ಕೆ ಮೊದಲು ಕುಲಾವಿ ಹೊಲಿಸಿದರು" ಸೆಂಟ್ರಲ್ ಮೊದಲು ಆಗಲಿ ಆಮೇಲೆ, ಯಾರ ಫೋಟೋ ಹಾಕಬೇಕು ಎನ್ನುವ ಬಗ್ಗೆ ವಿಚಾರ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ ಮೊಗಸಾಲೆಗೆ ಬೇರೆಯವರು ಬರುವುದರಿಂದ ಅಲ್ಲಿ ಬೇರೆ ಕೆಲವು ಕಾರ್ಯಕಲಾಪಗಳಿಗೆ ಅಡ್ಡಿ ಆಗುತ್ತದೆ ಎಂಬುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಅಧಿಕೃತ ವಿರೋಧ ಪಕ್ಷಕ್ಕಾಗಿ ಒಂದು ಕಛೇರಿಯನ್ನು ಬಿಡುತ್ತೇವೆಂದು ಹಿಂದೆ ತಿಳಿಸಲಾಗಿತ್ತು. ಸನ್ಮಾನ್ಯ ಸಂಸದೀಯ ಸದಸ್ಯರುಗಳೂ ಸಹ ಇದಕ್ಕೆ ಆಶ್ವಾಸನೆ ಕೊಟ್ಟಿದ್ದರು. ಆದರೆ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ವಿರೋಧಪಕ್ಷಗಳ ಎಲ್ಲ ಪಾರ್ಟಿಯವರಿಗೂ ಒಂದು ಕಛೇರಿಯನ್ನಾದರೂ ಕೊಟ್ಟರೆ ಪಾರ್ಟಿಗೆ ಸೇರಿದ ಪ್ರಮುಖರು ಅಲ್ಲಿ ಕುಳಿತುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ ನಾನು ಎಲ್ಲಾ ವಿಚಾರವನ್ನು ಪ್ರಸ್ತಾಪ ಮಾಡುವ ಮೊದಲು ನಾನು ಮತ್ತು ಸಹಕಾರ ಮಂತ್ರಿಗಳು ಮಾತನಾಡಿದ ವಿಷಯವನ್ನು ಸಂಗ್ರಹಿಸಿದ್ದಕ್ಕೆ ಇಂಟಲಿಜೆನ್ಸ್ ಸರ್ವಿಸ್‌ಗೆ ತಮ್ಮ ಅಭಿನಂದನೆ ಸಲ್ಲಿಸುತ್ತೇನೆ. ಆದರೂ ಸಚಿವರ ಜೊತೆಯಲ್ಲಿ ಮಾತನಾಡಬೇಕಾದರೆ ನಮಗೆ ಅಗತ್ಯವಿದ್ದರೆ ನಾವೇ ಬರುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಒಂದು ಕ್ಲಾರಿಫಿಕೇಷನ್ ಇದರಲ್ಲಿ ಚರ್ಚೆಗೆ ಬಂದಿರುವುದರಿಂದ ಹೇಳಬೇಕಾಗಿದೆ. ಬಾಲಬ್ರೂಯಿಯನ್ನು ನಮ್ಮ ಕಾನ್‌ಸ್ಟಿಟ್ಯೂಷನಲ್ ಕ್ಲಬ್ ರೀತಿಯಲ್ಲಿ ಮಾಡಬೇಕೆಂದು ತರಿದ ನಿರ್ಣಯಕ್ಕೆ ತಾವು ಪಾಲುದಾರರಾಗಿದ್ದೀರಿ.ಅದನ್ನು ಬೇಗ ಮಾಡಬೇಕು. ಅದು ನಿರ್ಣಯವಾಗಿದೆ. ಅದನ್ನು ತಾವು ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್: ಬಾಲಬ್ರೂಯಿಯಲ್ಲಿ ಭೂತವಿದೆ ಎಂದು ಹೇಳುತ್ತಾರೆ. ಆ ಭೂತಬಂಗಲೆಗೆ ನಾವು ಹೋಗುವುದು ಬೇಡ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಭೂತವಿಲ್ಲ ಏನು ಇಲ್ಲ. ನಾವೇ ಭೂತಗಳು. ಆ ಒಂದು ನಿರ್ಣಯವನ್ನು ತಾವು ಹೇಳಬೇಕು.

ಶ್ರೀ ಬಿ.ಎ. ಇದಿನಬ್ಬ :ಮಾನ್ಯ ವಾಟಾಳ್‌ನಾಗರಾಜ್‌ರವರೇ ತಮಗೆ ಭೂತದ ಬಗ್ಗೆ ನಂಬಿಕೆ ಇದೆಯೇ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ನಮ್ಮ ಗೆಳಿಯರಾದಂಥ ಶ್ರೀಮಾನ್ ಯಡಿಯೂರಪ್ಪನವರು ಚುನಾವಣೆಗೆ ಅಂಗೀಕರಿಸಲ್ಪಟ್ಟಿರತಕ್ಕಂಥ ರಾಷ್ಟ್ರೀಯ ಮಟ್ಟದ ಮತ್ತು ರಾಜ್ಯಮಟ್ಟದ ಪಕ್ಷಗಳಿಗೆ ಇಲ್ಲಿ ಒಂದು ಕಛೇರಿಯನ್ನು ಒದಗಿಸಿಕೊಡಬೇಕೆಂದು ನಾನು ಕೂಡ ಅರಿಕೆ ಮಾಡಿಕೊಂಡಂತೆ ನಮ್ಮ ಪಕ್ಷಕ್ಕೆ ಒಂದು ಕಚೇರಿಯನ್ನು ಒದಗಿಸಿಕೊಟ್ಟಿದ್ದಿರಿ. ಆದರೆ ನೋಟೀಸ್ ಮೇಲೆ ನೋಟೀಸ್ ಕೊಟ್ಟು ನಮ್ಮಿಂದ ಬಿಡಿಸಿದರು. ಆ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿದ್ದೆ. ಅಧಿಕೃತವಾಗಿರತಕ್ಕಂಥ ಪಕ್ಷಗಳಿಗೆ ಒಂದು ಕಚೇರಿಯನ್ನು ಕೊಡಬೇಕೆಂದುದು ಅದನ್ನು ತಾವು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಿರಿ. ಸುಮಾರು ಒಂದು ವರ್ಷದ ಹಿಂದೆ ನಡೆದಂಥ ಘಟನೆ. ಆದರೆ ಇದುವರೆಗೆ ಅದರ ಬಗ್ಗೆ ಏನೂ ಆಗಲಿಲ್ಲ, ಏನೂ ಕಾರ್ಯರೂಪಕ್ಕೆ ಬಂದಿಲ್ಲ. ಈಗ ತಾವು ಅನಧಿಕೃತ ವ್ಯಕ್ತಿಗಳನ್ನು ಮೊಗಸಾಲೆಗೆ ಬಿಡುವುದು ಬೇಡವೆಂದು

ಹೇಳತಕ್ಕಂಥದ್ದು ಯೋಗ್ಯವಾದಂಥ ನಿಲುವು ಆಗಿರುತ್ತದೆ. ಅದನ್ನು ನಾವು ಸಂಪೂರ್ಣವಾಗಿ ಸ್ವಾಗತಮಾಡುತ್ತೇವೆ. ನಾವು ಇಲ್ಲಿಗೆ ಬಂದಾಗ ಹೊರಗಡೆಯೋಗಿ ಮಾತನಾಡಬೇಕಾಗುತ್ತದೆ. ಹಾಗೆ ಮಾತನಾಡಬೇಕಾದರೆ ಪರಾಂಡದಲ್ಲಿ ನಿಂತು ಮಾತನಾಡಬೇಕು. ಆದ್ದರಿಂದ ಈಗ ತಾವು ಎಲ್ಲರೂ ಬಂದು ಸೆಂಟ್ರಲ್‌ಹಾಲ್ ಮಾಡಬೇಕು. ಆ ವ್ಯವಸ್ಥೆ ಜಾರಿಗೆ ಬರುತ್ತದೆಂದು ತಾವು ಹೇಳಿದಿರಿ. ಅದು ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಈಗ ನಾವು ಯಾರೊಬ್ಬರೊಡನೆ ಮಾತನಾಡಬೇಕಾದರೆ ಅವಕಾಶವಿಲ್ಲದಿರುವುದರಿಂದ ತತ್‌ಕ್ಷಣ ಕೆಲವು ಕೋಣೆಗಳನ್ನಾದರೂ ಅಧಿಕೃತವಾಗಿ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಇರತಕ್ಕಂಥ ಪಕ್ಷಗಳಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಅಧಿಕೃತ ವಿರೋಧಪಕ್ಷಗಳಿಗೆ ಕಛೇರಿಯನ್ನು ಒದಗಿಸತಕ್ಕಂಥದ್ದು ಮತ್ತೆ ಕಾನ್‌ಸ್ಟಿಟ್ಯೂಷನಲ್ ಕ್ಲಬ್ ಇನ್ನಿತರ ವಿಚಾರಗಳಲ್ಲಿ ಮಾತು ಕತೆ ನಾವು ಮಾಡಿದ್ದೇನೆ. ಆದರೆ ಕೆಲವು ಮಾಡಿಲಿಕ್ಕೆ ಬಾಕಿ ಇದೆ. ಅದನ್ನು ನಾನು ಒಪ್ಪುತ್ತೇನೆ. ಅದನ್ನು ಮಾಡುವಾಗ ತಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿ ಆದಷ್ಟು ಬೇಗ ಅದಕ್ಕೆ ವಿಶೇಷವಾದ ವ್ಯವಸ್ಥೆಯನ್ನು ಮಾಡುತ್ತೇನೆ. ಮತ್ತು ಕಾನ್‌ಸ್ಟಿಟ್ಯೂಷನ್ ಕ್ಲಬ್ ಬಗ್ಗೆ ನಿರ್ಣಯವಾಗಿದೆ ಎಂದು ಹೇಳುತ್ತೀರಿ, ಅದು ನನಗೆ ನೆನಪಿಲ್ಲ. ಆದರೆ ಕಾನ್‌ಸ್ಟಿಟ್ಯೂಷನ್ ಕ್ಲಬ್ ಬಾಲಬ್ರೂಯಿಯಲ್ಲಿ ಮಾಡಬೇಕೆಂದು ಪೇಳಿ ಸಲಹೆ ಮಾಡತಕ್ಕಂಥ ಸಂದರ್ಭದಲ್ಲಿ ನಾನು ಹಾಜರಿದ್ದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ತಮ್ಮ ಪಾರ್ಟಿ ಆದರೆ ನಿರ್ಣಯಕ್ಕೆ ಪಾರ್ಟಿ ಎಂದು ಅಲ್ಲ.

ಶ್ರೀ ಎಂ. ವಿ. ವೆಂಕಟಪ್ಪ : ತಾವು ಇದ್ದಿರಿ.

ಶ್ರೀ ಎಂ.ವೀರಪ್ಪಮೊಯಿಲಿ : ಈ ಸದನದಲ್ಲಿ ನಾವು ಇದರ ಬಗ್ಗೆ ವ್ಯವಸ್ಥೆ ಮಾಡಲಿಕ್ಕೆ ತಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇವೆ. ಬಹುಶಃ ಈ ಸದನ ಮುಗಿಯುವದರೊಳಗೆ ಈ ವ್ಯವಸ್ಥೆಯನ್ನು ಮಾಡುತ್ತೇವೆ. ಇನ್ನು ಸೆಂಟ್ರಲ್ ಹಾಲ್ ಬಗ್ಗೆ ಪೇಳಲೇಬೇಕಾದರೆ ತಾವು ಸೂಚನೆಯನ್ನು ಕೊಟ್ಟಿದ್ದೀರಿ, ಇದರ ಬಗ್ಗೆಯೂ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಕೇಬಲ್ ದೂರದರ್ಶನ ವಿರುದ್ಧ ಚಿತ್ರೋದ್ಯಮ ಬಂದ್ ಬಗ್ಗೆ ಪ್ರಸ್ತಾಪ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಕೇಬಲ್ ದೂರದರ್ಶನ ಜಾಲ ಬಹಳ ಜಾಸ್ತಿಯಾಗಿರುವುದರಿಂದ ಇಡೀ ರಾಜ್ಯದ ಚಿತ್ರೋದ್ಯಮಕ್ಕೆ ಧಕ್ಕೆಯುಂಟಾಗಿದೆ. ಇದನ್ನು ಪ್ರತಿಭಟಿಸಬೇಕಾಗಿದೆ. ಇಡೀ ರಾಜ್ಯಾದ್ಯಂಥ ಸಮಗ್ರ ಚಿತ್ರೋದ್ಯಮ ಬಂದ್ ಆಗಿದೆ. ಇವಕ್ಕೆ ಸರ್ಕಾರದವರು ಕಾನೂನನ್ನು ಮಾಡಿ ಈ ಜಾಲವನ್ನು ಸಂಪೂರ್ಣವಾಗಿ ತಪ್ಪಿಸುವುದಕ್ಕೆ ಒಂದು ವಿಧೇಯಕವನ್ನು ತಂದು ವಿವೇಚನೆಯಿಂದ ತೀರ್ಮಾನಕ್ಕೆ ಬರಬೇಕು. ಇದು ಒಂದು ಘೋರ ಅಪರಾಧವಾಗಿದೆ. ಪ್ರತಿ ಮನೆ ಮನೆಗೂ ಇವರೇ ಪ್ರವೇಟ್ ಏಜೆನ್ಸಿ ಎಂದು ಹೇಳಿಕೊಂಡು ಫಿಲಮ್‌ಗಳನ್ನು ಕೊಡುತ್ತಿರುತ್ತಾರೆ. ಕೆಟ್ಟ ಕೆಟ್ಟ ಫಿಲಮ್‌ಗಳನ್ನು ಹಾಕಿ ಇಡಿ ಬೆಂಗಳೂರಿನಲ್ಲಿ ಒಂದೇ ಅಲ್ಲ ಎಲ್ಲಕಡೆ ಬ್ಲೂ ಫಿಲಮ್‌ಗಳನ್ನು ಹಾಕಿ ಸಮಾಜವನ್ನು ಕೆಟ್ಟದಾರಿಗೆ ಎಳೆಯುತ್ತಿದ್ದಾರೆ. ಸರ್ಕಾರದ ಇವರ ಬಗ್ಗೆ ಎಚ್ಚರವನ್ನು ವಹಿಸಬೇಕು. ಕರ್ನಾಟಕದಲ್ಲಿ ಬಹುತೇಕ ಎಲ್ಲಾ ಭಾಗಗಳಲ್ಲಿಯೂ ಕೂಡ ಈ ರೋಗ ಹಬ್ಬಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಒಂದು ಕಾನೂನನ್ನು ಮಾಡಲು ತೀರ್ಮಾನವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತು ಇಡಿ ರಾಜ್ಯದಲ್ಲಿ ಚಿತ್ರೋದ್ಯಮ ಬಂದಾಗಿದೆ. ಸರ್ಕಾರದವರು ಈ ಬಗ್ಗೆ ಆಶ್ವಾಸನೆಯನ್ನು ಕೊಡಬೇಕು.